ಬಂದು ನಿಮ್ಮನ್ನು ಭೇಟಿಯಾಗಿ ಎಲ್ಲವನ್ನೂ ಹೇಳುತ್ತೇನೆ... ಥ್ಯಾಂಕ್ಸ್' ಎಂದ ಮಾನಸಿ ಕುರ್ಚಿಯ ಮೇಲೆ ಕುಸಿದು ಕುಳಿತಳು.

'ಯಾಕೆ? ಏನಾಯ್ತು? ಏನಂತೆ...' ಮೀರಾ ಅವಳ ಬಳಿ ಬಂದು ಅವಳ ಮುಖ ನೋಡಿ ಗಾಬರಿಯಿಂದ ಕೇಳಿದಳು. ಮಾನಸಿ ಏನು ಹೇಳಬೇಕು, ಹೇಗೆ ಹೇಳಬೇಕು ಎಂಬಂತೆ ಕುಳಿತಿದ್ದಳು.

'ಮಾನ್ಸಿ... ಏನಂತೆ? ಸಾಕ್ಷಿ ಅಲ್ಲಿದ್ದಾಳಂತ? ಏನಾಯ್ತು?' ಮೀರಾ ಮಾನಸಿ ಸ್ಥಿತಿ ಕಂಡು ಗಾಬರಿಯಾಗಿ ಕೇಳಿದಳು.

ಒಮ್ಮೆ ಮೀರಾಳತ್ತ ನೋಡಿದ ಮಾನಸಿ, 'ಪೂರ್ಣಿಮಾ ಹೇಳಿದ್ದು ನಿಜಾ ಕಣೆ. ಸಾಕ್ಷಿಯನ್ನು ಅನಾಟಮಿ ಬ್ಲಾಕ್ ಹತ್ತಿರ ಹೋಗೋದನ್ನು ನೋಡಿದ್ದು ಪಕ್ಕಾ ಆಯ್ತು' ಎಂದ ಮಾನಸಿ, ಶಿವಾನಂದ ಹೇಳಿದ ವಿಷಯವನ್ನು ತಿಳಿಸಿದಳು.

'ಅನಾಟಮಿ ಪ್ರೊಫೆಸರ್ ಇಳಂಗೋವನ್ ಕಂಡರೆ ಸಾಕ್ಷಿಗೆ ಆಗೋಲ್ಲ. ಅವರನ್ನು ನೋಡಿದ್ರೆ ರಾಕ್ಷಸನನ್ನು ನೋಡಿದ ಹಾಗಾಗುತ್ತೆ ಅಂತ ಹೇಳ್ತಿದ್ಲು. ನೀನು ನೋಡಿಲ್ಲ ಅಲ್ವಾ?' ಮೀರಾ ಹೇಳಿದಳು.

'ಹತ್ತಿರದಿಂದ ನೋಡಿಲ್ಲ...'

'ಅಬ್ಬಾ! ಒಳ್ಳೆಯ ರಾಕ್ಷಸನ ಹಾಗಿದ್ದಾನೆ. ತೊನ್ನು ರೋಗ ಬೇರೆ ಆವರಿಸಿಕೊಂಡು ಕತ್ತಲಲ್ಲಿ ಆ ಮುಖ ನೋಡಿದ್ರೆ ಭಯದಿಂದಾನೇ ಸತ್ತು ಹೋಗ್ತಾರೆ.'

'ಆ ವಿಷ್ಯ ಯಾಕೀಗ ಮೀರಾ?'

'ಸಾಕ್ಷಿಗೆ ಅಲ್ಲಿಗೆ ಹೋಗೋಕೆ ಸಾಧ್ಯವಿಲ್ಲಾಂತ ಅನ್ನೋಕೆ ತಿಳಿಸಿದೆ. ಏನೋ ಮುಖ್ಯವಾದ ವಿಷಯ ಇರ್ಬೇಕೂಂತ, ಶನಿವಾರ ಅನ್ನೋದನ್ನೂ ಮರೆತು ಹೋಗಿದ್ದಾಳೆ...'

'ಅವಳು ಮನೆಗೇನಾದ್ರೂ ಹೋಗಿರಬಹುದಾ?' ಮಾನಸಿ ಏನನ್ನೋ ಯೋಚಿಸುತ್ತಾ ಹೇಳಿದಳು.

'ಇದ್ದರೂ ಇರಬಹುದು. ಅವಳು ಯಾವಾಗ ಏನು ಮಾಡ್ತಾಳೇಂತ ಹೇಳೋದು ಕಷ್ಟ...' ಎಂದ ಮೀರಾ, 'ಅವಳ ತಾಯಿಗೆ ಫೋನ್ ಮಾಡಿ ಕೇಳೋಣವಾ?' ಕೇಳಿದಳು.

'ಈಗ ಬೇಡ, ಬೆಳಗ್ಗೆ ಮಾತನಾಡೋಣ. ಒಂದು ವೇಳೆ ಹೋಗಿರದೇ ಇದ್ದರೆ ಸುಮ್ಮನೆ ಗಾಬರಿಯಾಗ್ತಾರೆ...'

'ಮಾನ್ಸಿ... ಆ ಇಳಂಗೋವನ್‌ಗೆ ಕಾಲೇಜಿನಲ್ಲಿ ಒಳ್ಳೆಯ ಹೆಸರಿದೆ. ಎಲ್ಲರೂ ಹೆದರುತ್ತಾರೆ. ಅಷ್ಟು ಶಿಸ್ತು... ನಿಯಮ ಪಾಲನೆ ಅವರದು. ಒಳ್ಳೆಯ ಟೀಚರ್ ಕೂಡಾ ಅಂತ ಹೇಳ್ತಾರೆ...'

'ಮತ್ತೆ ಅವರ ವಿಷಯ ಶುರು ಮಾಡಿದೆಯಾ? ಮೊದಲು ಮುಂದೇನು ಮಾಡ್ಬೇಕೂಂತ ಹೇಳು...'

'ಅಲ್ಲಿಗೆ ಸಾಕ್ಷಿ ಹೋಗಿದ್ದಳೂಂತ ನಂಬೋಕೆ ಆಗ್ತಾಯಿಲ್ಲ.'

'ಮೀರಾ ಈ ಸುದ್ದಿ ಬಹಿರಂಗ ಆಗುವ ಮೊದಲು ವಾರ್ಡನ್‌ಗೆ ತಿಳಿಸಬೇಕು. ಇಲ್ಲದಿದ್ದರೆ ನಮ್ಮನ್ನು ಹೊರಗೆ ಹಾಕ್ತಾರೆ ಅಷ್ಟೇ...'

'ಸರಿ...'

'ಈಗಲೇ ಹೋಗೋಣವಾ?'

'ಬೇಡಾ... ಊಟ ಆದ್ಮೇಲೆ ಹೋಗೋಣ. ಆಗ ಮೇಡಂ ಊಟ ಮಾಡಿ ಫ್ರೀಯಾಗಿರ್ತಾರೆ' ಎಂದಳು ಮೀರಾ. 'ಸರಿ...' ಅವಳ ಮಾತಿಗೆ ಮಾನಸಿ ಒಪ್ಪಿಗೆ ಸೂಚಿಸಿದಳು.

★★★

ಹಾಸ್ಟೆಲಿನ ಕಾಂಪೌಂಡಿನ ಆವರಣದಲ್ಲಿ ಹಿಂದುಗಡೆಯೇ ಇದ್ದ ವಾರ್ಡನ್ ಮನೆಯ ಬಳಿಗೆ ಮಾನಸಿ ಮತ್ತು ಮೀರಾ ಬಂದಾಗ ಒಂಬತ್ತು ಗಂಟೆಯಾಗಿತ್ತು. ಹೊರಗಡೆ ಪೋರ್ಟಿಕೋದಲ್ಲಿ